'ಬೇಡಿ ಭಾವ, ಇಲ್ಲೇ ತಂದುಕೊಡಿ ನಾನೇ ಒಗೆದು ಇಸ್ತ್ರಿಹಾಕಿಕೊಡ್ತೀನಿ' ಅಂದಳು. ಆ ನಂತರ ಆ ಸೇವೆಯೂ ಲಭ್ಯವಾಯ್ತು...

ನನ್ನ ಊಟ, ಉಪಚಾರ, ಬಟ್ಟೆಬರೆ ಮಾತ್ರವಲ್ಲದೆ ಅಂತರಂಗದ ಕುಕ್ಕಲತೆಯಿಂದ ನನ್ನ ಕುರಿತು ಕಾಳಜಿ ವಹಿಸುವ ಆ ಜೀವ ಆಪ್ಯಾಯಮಾನವಾಗತೊಡಗಿತು. ನಂದನಾ ಫ್ಯಾಕ್ಟರಿಯಲ್ಲಿ ಎಷ್ಟು ಕ್ರಿಯಾಹೀನಳೋ ಮನೆಯಲ್ಲೂ ಅಷ್ಟೇ ಆಲಸಿ. ಮನೆಯ ಯಾವುದೂ ತನಗೆ ಸಂಬಂಧಿಸಿಲ್ಲ ಎಂಬಂತೆ ಇರುತ್ತಿದ್ದಳು. ನನ್ನೊಡನೆಯ ತಿರುಗಾಟಗಳು ಅವಳಿಗೆ ಪ್ರಿಯವಾಗೇನೋ ಇತ್ತು. ಸಂಜೆ ಮುತುವರ್ಜಿಯಿಂದ ಅಲಂಕರಿಸಿಕೊಂಡು ಕಾರಲ್ಲಿ ನನ್ನ ಪಕ್ಕದ ಸೀಟಲ್ಲಿ ಕೂತುಕೊಂಡು ಡಿನ್ನರಿಗೋ ಇನ್ನೆಲ್ಲಿಗೋ ಬರುವುದು ಅವಳಿಗೆ ಅತ್ಯಂತ ಪ್ರಿಯ ಹವ್ಯಾಸವಾಗಿತ್ತು. ಕ್ರಮೇಣ ಈ ರೀತಿಯ ಏಕತಾನತೆಯ ಬದುಕಿನಲ್ಲಿ ನಾನು ರುಚಿ ಕಳೆದುಕೊಳ್ಳತೊಡಗಿದೆ. ರತಿಯಂತಹ ನಂದನಾ, ಕಣ್ಣುಕೋರೈಸುವಂತೆ ಅಲಂಕರಿಸಿಕೊಂಡು ಮದುವೆಯ ನೆಪದಿಂದ ನನ್ನ ಕೈಗೆ ಸಿಗದಂತೆ ನನ್ನಿಂದ ದೂರ ದೂರವೇ ಉಳಿದು ನನ್ನನ್ನು ಸದಾ ನಿರಾಶೆಯ ಕೂಪಕ್ಕೆ ದೂಡುತ್ತಾ ಪ್ರಥಮಾನುಭವದ ಸವಿಗೆ ಎರವಾಗಿಸಿದ್ದು ನನಗೆ ಎಂದೂ ಕಾಡುವ ಕೊರತೆಯಾಯ್ತು.

ಫ್ಯಾಕ್ಟರಿಯ ಕೆಲಸಗಳಲ್ಲಿ ಪಳಗುತ್ತಾ ಬಂದಂತೆ ಮಾವನರಿಗೆ ನನ್ನ ಮೇಲೆ ಭರವಸೆ ಹುಟ್ಟಿ ಎಲ್ಲವನ್ನು ನನಗೇ ವಹಿಸುತ್ತಾ ಬಂದರು. ಅವರಿಗೂ ಆ ಬಿಡುವು ಬೇಕಿತ್ತು. ಈ ಫ್ಯಾಕ್ಟರಿ ಮಾತ್ರವಲ್ಲದೆ ಲ್ಯಾಂಡ್ ಡೆವಲಪ್‌ಮೆಂಟ್‌ನಂತಹ ಬೇರೆ ವಹಿವಾಟುಗಳಲ್ಲೂ ಅವರು ತೊಡಗಿಕೊಂಡಿದ್ದರು.

ಇನ್ನೇನು ವರ್ಷಾಂತ್ಯ ಬಂತು. ಅಮ್ಮನ ವರ್ಷಾಬ್ದೀಕಕ್ಕೆ ಇನ್ನೊಂದೇ ತಿಂಗಳು ಅಂದುಕೊಂಡೆ. ಆ ಮೇಲೆ ಮದುವೆ. ಮೊದಲಿಗೆ ಅವಳ ಕುರಿತಿದ್ದ ಸೆಳತ ಆಕರ್ಷಣೆಗಳು ಕಡಿಮೆಯಾಗಿದ್ದರೂ, ಕಾಮಜೀವನದ ಕನಸುಗಳೇನೂ ಕಡಿಮೆ ಇರಲಿಲ್ಲ! ಆ ಮೇಲೆ ನನ್ನ ಮಂಚದಲ್ಲಿ ಮಲಗದೆ ಎಲ್ಲಿ ಹೋದಾಳು ಅನ್ನಿಸಿ ಖುಷಿಯಾಗುತ್ತಿತ್ತು.

ಅಮ್ಮನ ವೈಕುಂಠ ಸಮಾರಾಧನೆಯ ಹಿಂದಿನ ರಾತ್ರಿ ರುದ್ರಪ್ರತಾಪರೆಡ್ಡಿಯವರಿಗೆ ಸ್ಟ್ರೋಕ್ ಆಗಿ ಆಸ್ಪತ್ರೆಗೆ ದಾಖಲು ಮಾಡಬೇಕಾಯ್ತು. ನಂದನಾ ಅಮ್ಮನ ತಿಥಿಗೂ ಬರಲಾಗಲಿಲ್ಲ. ರೆಡ್ಡಿಯವರು ಮನೆಗೆ ಬಂದ ಮೇಲೆ ಅವರ ದೇಖರೇಕಿಗೆ ಪುರುಷ ನರ್ಸನ್ನಿಟ್ಟಿದ್ದರು. ಉಸ್ತುವಾರಿಯೆಲ್ಲ ಹೇಮಾಳದೆ. ಮನೆಗೆಲಸ, ಅಡಿಗೆಯ ಕೆಲಸ, ಮೇಲ್ವಿಚಾರಣೆ ಜೊತೆಗೆ ರೆಡ್ಡಿಯವರ ಶುಶ್ರೂಷೆಗಳಲ್ಲಿ ಅವಳು ನವೆಯತೊಡಗಿದಳು. ಅವರು ಹಾಸಿಗೆಯಲ್ಲಿ ಮಲಗಿದಾಗ ಅವಳು ಬಹು ಗಂಭೀರಳಾಗಿಬಿಟ್ಟಳು. ಮದುವೆ ಇನ್ನೂ ಆರು ತಿಂಗಳು ಮುಂದಕ್ಕೆ ಹೋಯಿತು.

ದೀಪಾವಳಿ ಬಂತು. ಹಬ್ಬಕ್ಕೆ ನಂದನಾಳಿಗೆಂದು ಒಂದು ಸೀರೆ ಕೊಂಡುಕೊಂಡೆ. ಆ ಸಂಜೆ ಅದನ್ನವಳಿಗೆ ಕೊಟ್ಟೆ. ಸಾಕಷ್ಟು ಒಳ್ಳೆ ದರ್ಜೆಯ ರೇಷ್ಮೆ ಸೀರೆಯೇ ಅದು. ಅದನ್ನಲ್ಲೇ ತೆಗೆದು ನೋಡಿ, 'ಅಯ್ಯೋ ಈ ಥರದ್ದು ನನ್ನ ಹತ್ರ ಮೂರು ಇದೆ. ನಾನು ಹೇಗೂ ಹೇಮಾಳಿಗೆ ಸೀರೆ ತರಬೇಕೇಂದಿದ್ದೆ. ಇದನ್ನೇ ಕೊಟ್ಟುಬಿಡ್ತೀನಿ. ಓಕೇನಾ?' ಎಂದು ನನ್ನ ಒಪ್ಪಿಗೆಯನ್ನು ಪಡೆಯದೆ ಹೇಮಾಳಿಗೆ ವರ್ಗಾಯಿಸಿದಳು. ಹೇಮಾ ಗಲಿಬಿಲಿಯಿಂದ, 'ಅಕ್ಕಾ ಬೇಡ ಇದು ನೀವೇ ಉಟ್ಕೊಳಿ, ಭಾವ ತಂದಿರೋದು' ಅಂದರೂ ಕಿವಿಗೇ ಹಾಕ್ಕೊಳ್ಳದೆ, 'ಏನಾಗಲ್ಲ ನೀನೇ ಉಟ್ಕೋ' ಎಂದು ಉಡಾಫೆಯಿಂದ ಮಾತಾಡಿ ಹೊರಟೇ ಹೋದಳು. ನನ್ನ ಮುಖ ಕೋಪದಿಂದ ಕೆಂಪಾಗಿತ್ತು. ನಾನಾಗ ಕಂಪಿಸುತ್ತಿದ್ದೆ. ಹೇಮಾ ನನ್ನ ಬಳಿ ಬಂದು ಸೀರೆಯನ್ನು ಹಿಂತಿರುಗಿ ಕೊಡುತ್ತಾ, 'ಭಾವ... ಬೇಜಾರು ಮಾಡ್ಕೋಬೇಡಿ. ಅಕ್ಕಂಗೆ ಪಾಪ ಗೊತ್ತಾಗಲ್ಲ. ಇದು ನಂಗೆ ಬೇಡ ಅವಳಿಗೇ ಕೊಡುವಿರಂತೆ... ನೀವೇ ಇಟ್ಕೊಳಿ' ಅಂದಳು. ರಪ್ಪನೆ ಅವಳ ಕೈ ಹಿಡಿದು ಗಟ್ಟಿ ದನಿಯಲ್ಲಿ, 'ಬೇಡ ಇದು ನೀನೇ ಉಟ್ಟುಕೋಬೇಕು, ನಿಂಗಂತಾನೇ ತಂದಿರೋದು ಅರ್ಥ ಆಯ್ತು' ಅಂದೆ. ನನ್ನ ದನಿಯ ಗಡಸಿಗೆ ಬೆಚ್ಚಿ ಸರಿ ಎಂದು ಕತ್ತಲಗಿಸಿ ಅಲ್ಲೇ ಟೇಬಲಿನ ಮೇಲಿನ